ಶ್ರೀ ಎಸ್.ಎಂ.ಕೃಷ್ಣ :- ಕೆರೆಗಳ ಪುನರ್‌ನಿರ್ಮಾಣ ಕೆಲಸದ ಅತ್ಯಂತ ಪ್ರಾಮುಖ್ಯವಾದ ಭಾಗವೆಂದರೆ ಕೆರೆಗಳ ಚಕ್ಕು ಬಂದ ಗುರ್ತಿಸಬೇಕಾಗಿರುವುದು; ಈ ಮೂಲಕ ನಾನು ಸದನಕ್ಕೆ ಆಶ್ವಾಸನೆ ಕೊಡುತ್ತೇನೆ. ಇಡೀ ರಾಜ್ಯದಲ್ಲಿ ಕೆರೆಗಳ ಚಕ್ಕು ಬಂದಿಯನ್ನು ತೀರ್ಮಾನ ಮಾಡಲಿಕ್ಕೆ ಸಂಬಂಧಪಟ್ಟ ಇಲಾಖೆಗೆ ಸೂಕ್ತ ನಿರ್ದೇಶನ ಕೊಡುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ :- ಕೆರೆಗಳ ಒತ್ತುವರಿ ವಿಚಾರದಲ್ಲಿ 'ಕನ್ನಡ ಪ್ರಭ' ಪತ್ರಿಕೆಯಲ್ಲಿ ಮಾನ್ಯ ಸಚಿವರ ಒಂದು ಹೇಳಿಕೆ ಬಂದಿತ್ತು. ಯಾರು ಕೆರೆ ಒತ್ತುವರಿ ಮಾಡುವರೋ ಅದು ಕೋರ್ಟಿನ ನಿಂದನೆಯಾಗುವುದು, ಅದಕ್ಕೆ ಸಂಬಂಧಿಸಿದ ಜಿಲ್ಲಾಧಿಕಾರಿ ಮತ್ತು ಎಸ್‌ಪಿಗಳೇ ಕಾರಣಕರ್ತರಾಗುತ್ತಾರೆಂದು ಹೇಳಿದ್ದರು. ಹಾಗೇನಾದರೂ ಸುಪ್ರೀಂ ಕೋರ್ಟ್‌ನಲ್ಲಿ ಆಗಿದ್ದರೆ ಅದರ ನಕಲು ನಮಗೆಲ್ಲ ಕೊಟ್ಟರೆ ಪ್ರತಿ ದಿವಸ ಒಂದು ಕೇಸು ನಾವುಗಳೇ ಹಾಕಲು ಮುಂದೆ ಹೋಗುತ್ತೇವೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ:- ಇವೆಲ್ಲ ರೈತರ ಸಹಭಾಗಿತ್ವದಡಿ ಆಗಬೇಕಾದ ಕಾರ್ಯಕ್ರಮಗಳಿವು. ನೀರು ಬಳಕೆದಾರರ ಸಂಘ ರಚಿಸಿದ ಉದ್ದೇಶವೇ ಅದು. ರೈತರ ಸಹಭಾಗಿತ್ವದಡಿ ಆಗಬೆಕಾದ ಕಾರ್ಯಕ್ರಮಗಳಿವು. ನೀರು ಬಳಕೆದಾರರ ಸಂಘ ರಚಿಸಿದ ಉದ್ದೇಶವೇ ಅದು. ರೈತರು ಸಂಪೂರ್ಣವಾಗಿ ಇದರಲ್ಲಿ ಪಾಲ್ಗಳ್ಳಬೇಕೆಂಬ ಉದ್ದೇಶವಿದು. ಆಮೇಲೆ ಒತ್ತುವರಿ ವಿಚಾರದಲ್ಲಿ ಈಗಾಗಲೇ ಕಾನೂನೇ ಇದೆ. ಮತ್ತೆ ಹೊಸ ಕಾನೂನು ತರುವ ಅವಶ್ಯಕತೆ ಇಲ್ಲ. ಸುಪ್ರೀಂ ಕೋರ್ಟ್ ಬೇರೆ ವಿಚಾರದಲ್ಲಿ ಹೇಳಿದ್ದುದು. ಇದಕ್ಕೂ ನಾಳೆ ಅಪ್ಲೈ ಆಗಬಹುದೆಂದು ಹೇಳಿದ್ದೇ ಅಷ್ಟೇ. ಆಮೇಲೆ 243 ಕೆರೆಗಳ ಈಗಿನ ಕಾರ್ಯಕ್ರಮವೇನಿದೆ ಅದು 1999-2000ನೇ ಸಾಲಿನ ಕಾರ್ಯಕ್ರಮ. ಈಗ ಕೆರೆಗಳಲ್ಲಿ ಸಂಪೂರ್ಣ ನೀರಿರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲು ಆಗುವುದಿಲ್ಲ. ತದನಂತರ ಅದನ್ನು ಕೈಗೊಳ್ಳುತ್ತೇವೆ.

ಬಿಜಾಪುರ ತಾಲ್ಲೂಕಿನಲ್ಲಿ ಬಬಲೆಶ್ವರ ಏತ ನೀರಾವರಿ ಯೋಜನೆಯ ಅನುಷ್ಠಾನ

394 (3592) ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) :- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ ?

ಅ) ಬಿಜಾಪುರ ತಾಲ್ಲೂಕಿನಲ್ಲಿ ಬಬಲೇಶ್ವರ ಏತ ನೀರಾವರಿ ಯೋಜನೆಯ ಕಾಮಗಾರಿ ಮಂಜೂರಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ, ಯೋಜನೆಯನ್ನು ಅನುಷ್ಠಾನಗೊಳಿಸದಿರಲು ಕಾರಣವೇನು?

ಇ) ಈ ಯೋಜನೆಯ ಕಾಯರನಿರ್ವಹಣೆಗಾಗಿ ಒಂದು ಉಪ ವಿಭಾಗವನ್ನು ಸರ್ಕಾರ ವರ್ಗಾಯಿಸಲು ಆದೇಶಿಸಿದ್ದು ಇದುವರೆವಿಗೂ ವರ್ಗಾಯಿಸದಿರಲು ಕಾರಣವೇನು?

ಈ) ಈ ಯೋಜನೆಯನ್ನು ಪರಿಪೂರ್ಣಗೊಳಿಸಲು ಕಾಲಮಿತಿ ಏನಾದರೂ ಇದೆಯೇ?

ಶ್ರೀ ಎಚ್.ಕೆ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಮಂಜೂರಾಗಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿ ಹೆಚ್ಚುವರಿ ಉಪವಿಭಾಗಗಳನ್ನು ಗುರ್ತಿಸಲಾಗಿದ್ದು, ಒಂದು ಉಪವಿಭಾಗಗಳನ್ನು ಗುರ್ತಿಸಲಾಗಿದ್ದು, ಒಂದು ಉಪ ವಿಭಾಗವನ್ನು ಅನ್ವೇಷಣಾ ಕಾರ್ಯಕ್ಕೆ ವರ್ಗಯಿಸಲಾಗುವುದು.

ಈ) ಯೋಜನೆ ಮಂಜೂರಾತಿ ಆದ ನಂತರ ಕಾಲಮಿತಿ ನಿಗಧಿಗೊಳಿಸಲಾಗುವುದು.

12.00 ಪಿ.ಎಂ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದ ಬಗ್ಗೆ ಎರಡು ಮಾತಿಲ್ಲ, ಆದರೆ ಈ ಯೋಜನೆ ಪ್ರಾರಂಭಿಸುವಾಗ ಬಿಜಾಪುರ ತಾಲೂಕಿಗೆ ಒಂದು ವಿಶೇಷ ಒತ್ತು ಕೊಡಬೇಕೆಂಬ ದೃಷ್ಟಿಕೋನದಿಂದ ಹಿಂದಿನ ಸರ್ಕಾರ ಒಂದು ಯೋಜನೆ ರೂಪಿಸಿತ್ತು. ಕಾರಣ ಇಷ್ಟೇ; ನಾಳೆ ಇಂಡಿ ಬ್ರಾಂಚ್ ಕೆನಾಲ್, ಮುಳುವಾಡ ಏತನೀರಾವರಿ ಕಾರ್ಯ ಆದರೆ ಬಿಜಾಪುರ ತಾಲ್ಲೂಕು ಬಿಟ್ಟು ಬಿಜಾಪುರದ ಎಲ್ಲಾ ತಾಲೂಕುಗಳಿಗೂ ನೀರಾವರಿ ಆಗುತ್ತದೆ. ಆದ ಕಾರಣ ಇದಕ್ಕೊಂದು ವಿಶೇಷ ಏತ ನೀರಾವರಿ ಯೋಜನೆ ಮಾಡಬೇಕೆಂದು ಹಿಂದಿನ ಸರ್ಕಾರ ಪ್ರಯತ್ನ ಮಾಡಿತು. ಇದರ ಬಗ್ಗೆ ನಿಮ್ಮ ಸರ್ಕಾರ ಬಂದಮೇಲೆ ನಾನು ಮೂರು ಭಾರಿ ನಿಮ್ಮನ್ನು ಕಂಡೆ, ಅಂದರೆ 6-5-1999, 11-11-1999 , 24-4-2000 ದಿನಗಳಂದು ನಿಮ್ಮ ಬಳಿ ಬಂದು ವೈಯಕ್ತಿಕವಾಗಿ ಒಂದು ಪತ್ರವನ್ನೂ ಕೊಟ್ಟೆ. ಇದರ ವಿವರವಾದ ಸರ್ವೆ ಮಾಡಿಸಿ ಒಂದು ಪ್ರಾಜೆಕ್ಟ್ ರಿಪೋರ್ಟ್ ಮಾಡಿಸಿರಿ ಎಂದು, ಹೇಳಿದ್ದೆ. ಈಗಾಗಲೇ ಇದು ಟಿಎಸಿ , ಎಂಐಜಿಯಲ್ಲೂ ಆಪ್ರೂವ್ ಆಗಿದೆ. ಆದರೆ ಇನ್ನೂವರೆಗೂಸರ್ವೆ ಮಾಡಲು ಯಾರಿಗೆ ತಾವು ಆದೇಶ ಕೊಟ್ಟರೋ ಗೊತ್ತಾಗುತ್ತಿಲ್ಲ. ಅವರು ಇನ್ನೂ ಬರೀ ಪತ್ರವ್ಯವಹಾರ ಮಾಡುತ್ತಿದ್ದಾರೆ, ಒಂದೂವರೆ ವರ್ಷವಾಯಿತು. ಈಗಾಗಲೆ ನೀವು ಮುಳುವಾಡ ಏತ ನೀರಾವರಿಯನ್ನು ಪ್ರೈವೇಟ್‌ನವರಿಗೆ ಕೊಟ್ಟು ಸರ್ವೆ ಮಾಡಿಸುತ್ತಿದ್ದೀರಿ. ಅದೇ ರೀತಿ ಈ ಬಬಲೇಶ್ವರ ಏತ ನೀರಾವರಿ ಯೋಜನೆಯನ್ನೂ ಪ್ರೈವೇಟ್ ಕನ್‌ಸಲ್ಟ್‌ಗೆ ಕೊಟ್ಟು ಸರ್ವೆ ಮಾಡಿಸಿ ಪ್ರಾಜೆಕ್ಟ್ ರಿಪೋರ್ಟನ್ನು ಆದಷ್ಟು ಬೇಗ ಹೊರಗೆ ತಂದು ಏನಾದರೂ ಒಂದು ಕ್ರಮ ಕೈಗೊಳ್ಳುತ್ತೀರಾ ಎಂದು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಚ್.ಕೆ. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವಾನಂದ ಪಾಟೀಲರು ವ್ಯಕ್ತ ಮಾಡಿರುವ ಭಾವನೆಗಳಿಗೆ ನಾವು ಹೂಗೊಡಬೇಕಾಗುತ್ತದೆ. ಅವರು ನನ್ನನ್ನು ಮೂರು ಭಾರಿ ಕಂಡಿದ್ದು ನಿಜ. ಈ ಯೋಜನೆಯ ಮಹತ್ವದ ಬಗ್ಗೆ ಅವರು ತಿಳಿಸಿದ ಮೇಲೆ ಈ ಯೋ ಜನೆಯ ಸರ್ವೆ ಸಲುವಾಗಿಯೇ ನಮ್ಮ ಕೃಷ್ಣ ಜಲಭಾಗ್ಯ ನಿಗಮದ ಹೆಚ್ಚುವರಿ ಡಿವಿಜನ್ಸ್ ಎಂದು ಏನು ನಾವು ಗೊತ್ತು ಮಾಡಿದ್ದೆವು ಆ ಡಿವಿಜನ್ ಅನ್ನು ಈ ಸರ್ವೆ ಕೆಲಸಕ್ಕಾಗಿ ವರ್ಗಾಯಿಸಬೇಕೆಂದು ನಿರ್ಣಯ ಮಾಡಿದೆವು. ಮೂರು ವರ್ಷಗಳಿಂದ ಈ ಚರ್ಚೆ ನಡೆದಿದೆ. ಎಂಐಪಿಸಿ. ಬೋರ್ಡಿನಲ್ಲೂ ಸರ್ವೆ ಮಾಡಿಸಬೇಕೆಂದು ನಿರ್ಣಯವಾಗಿದೆ ಹೊರತು ಸರ್ವೆ ಮಾಡಿರುವ ಪ್ರಾಜೆಕ್ಟ್ ವರದಿ ಬಂದಿಲ್ಲ. ಈ ಸಂದರ್ಭದಲ್ಲಿ ನಾನು ಮಾನ್ಯ ಸಚಿವರಿಗೆ ಒಂದು ಆಶ್ವಾಸನೆ ಕೊಡುತ್ತೇನೆ; ಒಂದು ವೇಳೆ 15 ತಿಂಗಳಲ್ಲಿ ಡಿವಿಜನ್ ಮಾಡುವ ಮೂಲಕ ಸರ್ವೆ ಕಾರ್ಯ ಆಗದೇ ಹೊದರೆ ಹಲವಾರು ಯೋಜನೆಗಳನ್ನು

ತ್ವರಿತಗೊಳಿಸಬೇಕೆಂಬ ಉದ್ದೇಶದಿಂದ ಖಾಸಗಿ ಕನ್‌ಸಲ್ಟೆಂಟ್ಸ್‌ಗೆ ಹೇಗೆ ನಿರ್ವಹಿಸಿದ್ದೆವೋ ಅದೇ ರೀತಿ ನಮ್ಮ ಅಧಿಕಾರಿಗಳ ಜೊತೆ ಚರ್ಚಿಸಿ ಈ ಕೆಲಸವನ್ನೂ ಖಾಸಗಿಯವರಿಗೆ ಕೊಡುವ ಬಗ್ಗೆ ನಾವು ಪರಿಶೀಲಿಸುತ್ತೇವೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :- ನಿಗಮದಲ್ಲಿ ಯಾವುದು ಐಡ್ಲ ಸಬ್ ಡಿವಿಜನ್ ಇದೆಯೋ ಅದರ ಕಡೆಯಿಂದ ಮಾಡಿಸುತ್ತೇನೆ ಎಂದಿದ್ದಿರಿ, ಅದೇ ಪ್ರಕಾರ ನಾವು ಪ್ರಯತ್ನಿಸಿದೆವು. ಆದರೆ ಅವರಿಗೆ ಎಷ್ಟು ಐಡ್ಲ ಸಬ್ ಡಿವಿಜನ್ಸ್ ಇವೆ ಎಂದು ಐಡೆಂಟಿಫೈ ಕೂಡ ಮಾಡಿ ಕೊಟ್ಟೆವು. ನಿಪ್ಪಾಣಿ ಸಬ್ ಡಿವಿಜನ್ ಐಡ್ಲ ಆಗಿ ಒಂದೂವರೆ ವರ್ಷವಾಗಿದೆ.

ಶ್ರೀ ಎಚ್.ಕೆ ಪಾಟೀಲ್ :- ಹೆಚ್ಚುವರಿ ಸಬ್ ಡಿವಿಜನ್ ಅನ್ನು ವರ್ಗಾಯಿಸುವ ನಿರ್ಣಯವನ್ನು ನಾವು ಎರಡು ಮೂರು ತಿಂಗಳ ಹಿಂದೆ ತೆಗೆದುಕೊಂಡಿದ್ದೇವೆ. ಆದ್ದರಿಂದ ಯಾವುದೋ ಸಬ್ ಡಿವಿಜನ್‌ಗೆ ನಾವು ಇದನ್ನು ಒಪ್ಪಿಸುವುದಿಲ್ಲ. Sub - divisions will be transferred only for this work.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :- ಈ ಇಲಾಖೆಗೆ ವಿಲ್ಲೇ ಇಲ್ಲ, ಬರೀ ಸಬ್ ಡಿವಿಜನ್‌ಗೆ ಒಪ್ಪಿಸುವ ಪತ್ರ ವ್ಯವಹಾರಕ್ಕೇ ಒಂದೂವರೆ ವರ್ಷ ಮಾಡಿದರು, ನಿಮಗೆ ವಿಶ್ವಾಸ ಇದ್ದರೆ ಅವರ ಕೈಯಲ್ಲೇ ಮಾಡಿಸಿ, ಇಲ್ಲದಿದ್ದರೆ ಪ್ರೈವೇಟ್‌ನವರಿಗೆ ಕೊಡಿರಿ. ಈ ಬಗ್ಗೆ ಒಂದು ಕಾಲಮಿತಿ ಹೇಳಿ. ಈಗಾಗಲೇ ಇದರದು ಲೈನ್ ಎಸ್ಟಿಮೇಟ್ ಆಗಿದೆ. ಡಿಟೈಲ್ಡ್ ಸರ್ವೆ ಮಾಡಲು ಅಬ್ಬಾ ಎಂದರೂ ಮೂರು ತಿಂಗಳು ಸಾಕು. ಅದು ಬೇಡ ಅಂದರೆ 6 ತಿಂಗಳಲ್ಲಾದರೂ ಮಾಡಿಸಿ.

ಶ್ರೀ ಎಚ್.ಕೆ. ಪಾಟೀಲ್ :- ಒಟ್ಟಿನಲ್ಲಿ ನಾನು ಇಷ್ಟು ಹೇಳಬಹುದು, ನಾನು ಈ ವಿಚಾರವನ್ನು ಚರ್ಚೆ ಮಾಡುತ್ತೇನೆ. 15 ತಿಂಗಳಲ್ಲಿ ಸಂಪೂರ್ಣ ಪ್ರಾಜೆಕ್ಟ್ ರಿಪೋರ್ಟ್‌ನ್ನು ನಾನು ರೆಡಿ ಮಾಡಿಸುತ್ತೇನೆ.

ವಿಶ್ವೇಶ್ವರಯ್ಯ ನಾಲಾ ಆಧುನೀಕರಣದ ಕಾಮಗಾರಿ

395 (3590) ಶ್ರೀ ಎಂ.ಎಸ್.ಆತ್ಮಾನಂದ (ಮಂಡ್ಯ) :- ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಶ್ವೇಶ್ವರಯ್ಯ ನಾಲಾ ಆಧುನೀಕರಣ ಕಾಮಗಾರಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ವಿಶ್ವೇಶ್ವರಯ್ಯ ನಾಲಾ ಆಧುನೀಕರಣ ಕಾಮಗಾರಿಗೆ ಈವರೆಗೆ ಸರ್ಕಾರ ಖರ್ಚು ಮಾಡಿರುವ ಹಣದ ಮಾತ್ತವೆಷ್ಟು;

ಇ) ಸಂಪರ್ಕ ನಾಲೆಯ ಸುರಂಗ ನಿರ್ಮಾಣದ ಕಾರ್ಯ ಯಾವ ಹಂತದಲ್ಲಿದೆ;

ಈ) ಈ ವರೆವಿಗೂ ಸುರಂಗ ನಿರ್ಮಾಣಕ್ಕೆ ವೆಚ್ಚ ಮಾಡಿರುವ ಹಣವೆಷ್ಟು?